ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ESTD-1964

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು - 570 025**

☎: 0821-2548236 & 2548380 Fax: 0821-2548238 E-mail: jssautonomous@gmail.com www. jsscacs.edu.in

ಸಂಖ್ಯೆ : ಜೆಎಸ್‌ಎಸ್‌ಸಿಎಂ 2230/2012-13

ದಿನಾಂಕ : **15.02.2013**

ಪ್ರಕಟಣೆಯ ಕೃಪೆಗಾಗಿ

## ಪಂಡಿತ ಮದನ ಮೋಹನ ಮಾಳವೀಯ ಅವರ 151ನೇ ಜಯಂತಿ ಕಾರ್ಯಕ್ರಮ

'ಭಾರತ ಸ್ವಾತಂತ್ರ್ಯ ಪಡೆದಿರುವುದರ ಹಿಂದೆ ಅನೇಕ ಮಹಾನುಭಾವರ ತ್ಯಾಗ, ಬಲಿದಾನವಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವುದರ ಜೊತೆಗೆ ಇಲ್ಲಿನ ಸಂಸ್ಕೃತಿಯನ್ನು ಉಳಿಸುವ, ಪುನಾರೂಪಿಸುವ ಕೆಲಸವನ್ನು ಅನೇಕ ನಾಯಕರು ಮಾಡಿದ್ದಾರೆ. ನಮ್ಮ ಮನೆ, ಮನಗಳಲ್ಲಿ ಆ ಮಹಾನುಭಾವರ ವಿಚಾರಗಳು, ಆದರ್ಶಗಳು ತುಂಬಿರಬೇಕು. ಅಂತಹ ಮಹನೀಯರುಗಳಲ್ಲಿ ಪಂಡಿತ ಮದನ ಮೋಹನ ಮಾಳವೀಯರು ಒಬ್ಬರು. ಬಡತನದಲ್ಲಿ ಹುಟ್ಟಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದರೂ ದೇಶದ ಹಿತಕ್ಕಾಗಿ ಬದುಕನ್ನೇ ಮುಡುಪಿಟ್ಟರು. ವಕೀಲ ವೃತ್ತಿಯನ್ನು ಕೈಗೊಂಡ ಅವರು ಅದಕ್ಕೊಂದು ಗೌರವ ತಂದಿತ್ತರು. ಬನಾರಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಈ ನೆಲದ ಸಂಸ್ಕೃತಿಗಾಗಿ ಹೊಸ ಮುನ್ನುಡಿ ಬರೆದರು. ದೇಶದ ಸಾಂಸ್ಕೃತಿಕ ಸಂಪತ್ತಿನ ರಕ್ಷಣೆಗಾಗಿ ಶ್ರಮಿಸಿದ ಇಂತಹ ಶ್ರೇಷ್ಠ ನಾಯಕರು ನಮಗೆ ಆದರ್ಶವಾಗಬೇಕು' ಎಂದು ರಾಷ್ಟ್ರಗೌರವ ಸಂರಕ್ಷಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಟಿ. ಎನ್. ರಾಮಕೃಷ್ಣ ಅವರು ಅಭಿಪ್ರಾಯ ಪಟ್ಟರು.

ಪಂಡಿತ ಮದನ ಮೋಹನ ಮಾಳವೀಯ ಅವರ ಜೀವನ ಮತ್ತು ಸಾಧನೆ ಪರಿಚಯಿಸುವ ಕಿರು ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು. ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಅನೇಕ ಮಹಾನುಭಾವರುಗಳ ಭಾವಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ವಿಭಾಗದ ನಿರ್ದೇಶಕರಾದ ಟಿ. ಡಿ. ಸುಬ್ಬಣ್ಣ ಅವರು ಮಾತನಾಡುತ್ತಾ 'ಇಂದಿನ ಸಂದರ್ಭದಲ್ಲಿ ದೇಶಕ್ಕಾಗಿ ಹೋರಾಡಿದ, ರಾಷ್ಟ್ರಪ್ರೇಮಿಗಳ ಸ್ಮರಣೆಯ ಅಗತ್ಯವಿದೆ. ಇಂದಿನ ತಲೆಮಾರು ಆಧುನಿಕತೆಯ ಗುಂಗಿನಲ್ಲಿ ಸಂಸ್ಕೃತಿಯನ್ನು ಮರೆಯುತ್ತಿರುವುದು ವಿಷಾದನೀಯವಾದುದು. ಇಂದಿನ ರಾಜಕಾರಣಿಗಳು ಈ ದೇಶದ ಬಗೆಗೆ ಅಷ್ಟೊಂದು ಕಾಳಜಿ ಇದ್ದಂತೆ ಕಾಣುತ್ತಿಲ್ಲ. ಇವರುಗಳು ಈ ದೇಶಕ್ಕಾಗಿ ಶ್ರಮಿಸಿದ ಇಂತಹ ನಾಯಕರನ್ನು ನೆನೆದು ಮುನ್ನಡೆಯಬೇಕು' ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ. ವಿ. ಸಾಂಬಶಿವಯ್ಯ ಅವರು ಸ್ವಾಗತಿಸಿದರು. ಶೈಕ್ಷಣಿಕ ಡೀನ್‌ರವರಾದ ಪ್ರೊ. ಎಂ. ಬಿ. ಮಲ್ಲಿಕಾರ್ಜುನ ಪಂಡಿತ್ ಅವರು ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ. ಪ್ರಭುಸ್ವಾಮಿ ಅವರು ನಿರೂಪಿಸಿದರು. ವಿದ್ಯಾರ್ಥಿ ಎಚ್. ಎಂ. ಮಲ್ಲಿಕಾರ್ಜುನ ಪ್ರಾರ್ಥನೆ ಸಲ್ಲಿಸಿದರು.

M. B. Mallikarjunapandit

For ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ.

ಸಂಪಾದಕರು

________________

________________